ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸುಮಾರು ಅಷ್ಟಿರಬಹುದು ಎನ್ನುವ ಸಂಖ್ಯೆಯಲ್ಲಿ ಇದ್ದಾರೆ. ದಿನಾಂಕ 7.3.98ರಿಂದ ಇಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬಗ್ಗೆ ಯಾರೂ ಗಮನಿಸಲಿಲ್ಲ. ಸುಮಾರು ವರ್ಷಗಳಿಂದ ಸರ್ಕಾರ ಅವರಿಗೆ ಒಂದೇ ರೀತಿಯಾದಂತಹ ....

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಶ್ರೀರಾಮರೆಡ್ಡಿಯವರಿಗೆ ಮಹಿಳೆಯರ ಬಗ್ಗೆ ಕಾಳಜಿ ಬಂದಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ ಅಧ್ಯಕ್ಷರೇ, ಯಾವುದಕ್ಕೂ ತಮಾಷೆ ಮಾಡುವುದಕ್ಕೆ ಮಿತಿ ಇರುತ್ತದೆ. ಪ್ರತಿಯೊಂದಕ್ಕೂ ಆ ರೀತಿ ಮಾತನಾಡುವುದು ಒಳ್ಳೆಯದಲ್ಲ. ಮಾನ್ಯ ಅಧ್ಯಕ್ಷರೇ, 15 ದಿವಸದಿಂದ ಆ ಮಹಿಳೆಯರೆಲ್ಲಾ ಸತ್ಯಾಗ್ರಹ ಕುಳಿತಿದ್ದಾರೆ. ಮೂರು ವರ್ಷಗಳಿಂದ ಈ ವಿಷಯ ಪ್ರಸ್ತಾಪವಾಗುತ್ತಿದೆ. ಅವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಅವರಿಗೆ ನೂರಕ್ಕೆ ನೂರರಷ್ಟು ಸಂಬಳವನ್ನು ಕೊಡುವ ಬಗ್ಗೆ ಸರ್ಕಾರ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಅವರ ಸಹಾಯಕ್ಕೆ ಸರ್ಕಾರ ಬರಬೇಕು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ. ತಮ್ಮ ಮುಖಾಂತರ ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಸಂಬಳ ಕೊಡಿಸತಕ್ಕಂಥದ್ದು ಹಾಗೂ ಖಾಯಂ ಮಾಡಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ. ಅವರು ಬಹಳ ಕ್ರಿಟಿಕಲ್ ಕಂಡೀಷನ್‌ನಲ್ಲಿ ಇದ್ದಾರೆ.

MR. SPEAKER : It is a very pathetic case. It will not run into a big sum also.

ಶ್ರೀ ವಾಟಾಳ್ ನಾಗರಾಜ್ : ಅವರದ್ದು ಬಹಳ ಕಣ್ಣೀರಿನ ಕತೆಯಾಗಿದೆ.

ಶ್ರೀ ಜೆ.ಹೆಚ್. ಪಟೇಲ್ : ತಾವೇ ಆ ರೀತಿ ಅಭಿಪ್ರಾಯಪಟ್ಟರೆ ನಾನು ಬೇಡವೆಂದು ಹೇಳುತ್ತೇನಾ?

ಅಧ್ಯಕ್ಷರು : ಅವರು ಹೇಳಿದರಲ್ಲಾ, ತಾವೇ ಆ ರೀತಿ ಅಭಿಪ್ರಾಯ ಪಟ್ಟರೆ ಇಲ್ಲವೆಂದು ಹೇಳುತ್ತೇನೆ ಎಂದು.

ಆನೇಕಲ್ ತಾಲ್ಲೂಕು ಹುಸ್ಕೂರು ಗ್ರಾಮದಲ್ಲಿನ ಎ.ಪಿ.ಎಂ.ಸಿ. ಜಾಗದ ಒತ್ತುವರಿ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅಧ್ಯಕ್ಷರೆ, ಆನೇಕಲ್ ತಾಲ್ಲೂಕು, ಹುಸ್ಕೂರು ಗ್ರಾಮದಲ್ಲಿ ಸುಮಾರು ಹಿಂದೆ ನಾನು ಎ.ಪಿ.ಎಂ.ಸಿ. ಮಿನಿಸ್ಟರ್ ಆಗಿದ್ದಾಗ ಒಂದು ಮಾರುಕಟ್ಟೆ ಬೇಕು ಎಂದು ಆ ಜಾಗದಲ್ಲಿ ಒತ್ತಾಯ ಇತ್ತು. ಸುಮಾರು ಇಪ್ಪತ್ತು ಎಕರೆ ಜಾಗವನ್ನು ಸರ್ಕಾರ ಎ.ಪಿ.ಎಂ.ಸಿ.ಗೆ ಕೊಟ್ಟಿತು, ಸರ್ಕಾರಕ್ಕೆ ಎಂ.ಪಿ.ಎಂ.ಸಿ. ಕಡೆಯಿಂದ 20 ಲಕ್ಷಕ್ಕೂ ಮೇಲೆ ಹಣವನ್ನು ಕೊಟ್ಟಿದ್ದೇವೆ. ಆ ಇಪ್ಪತ್ತು ಎಕರೆ ಜಾಗವನ್ನು ಸರ್ಕಾರ ಎ.ಪಿ.ಎಂ.ಗೆ ಕೊಟ್ಟಿದ್ದರೂ ಆ ಜಾಗವನ್ನು ಒತ್ತುವರಿ ಮಾಡುವುದಕ್ಕೆ ಬೇರೆಯವರು ಪ್ರಯತ್ನ ಮಾಡುತ್ತಿದ್ದಾರೆ, ಯಾವುದೇ ಕಾರಣಕ್ಕೂ ಒತ್ತುವರಿಗೆ ಅವಕಾಶವನ್ನು ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ಸಚಿವರು) : ಆಗಬಹುದು

ಆಲಮಟ್ಟಿಯಲ್ಲಿ ಕೆಲಸ ಮಾಡುವ ಇಂಜನಿಯರ್‌ಗಳ ಬಗ್ಗೆ

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಆಲಮಟ್ಟಿಯಲ್ಲಿ ಜಾಗವೆಲ್ಲಾ ಮುಳುಗಡೆಯಾಗಿದ್ದು, ಈಗಾಗಲೇ ಪುನರ್ ವಸತಿ ಕಾರ್ಯಗಳು ನಡೆಯುತ್ತಿವೆ. ಅಲ್ಲಿರತಕ್ಕಂಥ ಇಂಜಿನಿಯರ್‌ಗಳಿಗೆ ಅಲ್ಲೇ ಕೆಲಸ ಕೊಡುತ್ತೇವೆ ಎಂಬ ಆಶ್ವಾಸನೆಯನ್ನು ಸರಕಾರದವರು ಕೊಟ್ಟಿದ್ದರು. ಆದರೆ ಈಗ ಬಂದಿರತಕ್ಕಂಥ ಸುದ್ದಿ ಪ್ರಕಾರವಾಗಿ 49 ಜನರಲ್ಲಿ ನಾಲ್ಕು ಜನರನ್ನು ಬಿಟ್ಟು ಉಳಿದೆಲ್ಲಾ ಮಂಡ್ಯದವರನ್ನೇ ನೇಮಕ ಮಾಡಿಕೊಂಡಿದ್ದಾರೆ. ಈಗ ಅಲ್ಲಿರುವಂಥ ಇಂಜಿನಿಯರ್‌ಗಳು ಹೋರಾಟ ಮಾಡುತ್ತಿದ್ದು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಕೇವಲ ನಾಲ್ಕು ಜನಕ್ಕೆ ಬಿಟ್ಟು ಉಳಿದೆಲ್ಲವನ್ನೂ ಮಂಡ್ಯದವರಿಗೆ ಕೊಟ್ಟರೆ ಆಲಮಟ್ಟಿಯಲ್ಲಿರುವಂಥ ಜನಗಳು ಏನು ಮಾಡಬೇಕು? ನನಗೆ ಮಂಡ್ಯನೇ ಆಲಮಟ್ಟಿಯೋ ಮಂಡ್ಯಾನೇ ಇಂಡಿಯಾನೋ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಕೇವಲ ನಾಲ್ಕು ಜನರನ್ನು ಯಾವ ಕಾರಣಕ್ಕಾಗಿ ಬಿಡಲಾಗಿದೆ ಎಂಬ ಬಗ್ಗೆ ವಿವರಗಳಿಲ್ಲ. 440 ಜನರನ್ನು ಹಿಂದೆ ಪ್ರಾದೇಶಿಕ ಅಸಮಾನತೆ ಇತ್ತು ಎಂಬ ಕಾರಣಕ್ಕಾಗಿ ರಿಕ್ರೂಟ್‌ಮೆಂಟ್ ಮಾಡಿದ್ದರು. ರಿಕ್ರೂಟ್‌ಮೆಂಟ್ ಮಾಡಿರತಕ್ಕಂಥ ಸಿಂಧುತ್ವವನ್ನು ಕೆ.ಎ.ಟಿ.ಯಲ್ಲಿ ಪ್ರಶ್ನೆ ಮಾಡಿದ್ದರು. ಕೆ.ಎ.ಟಿ.ಯಲ್ಲಿ ಪ್ರಶ್ನೆ ಮಾಡಿರತಕ್ಕಂಥದ್ದು ಸರಿಯಾದುದಲ್ಲ ಎಂದು ಹೇಳಿದಮೇಲೆ ಮತ್ತೆ ಅವರನ್ನು ಸೇರಿಸಿಕೊಳ್ಳಬೇಕೆಂದು ನಿರ್ಣಯ ಮಾಡಿ ಅವರನ್ನೆಲ್ಲಾ ಸೇರಿಸಿಕೊಂಡಿದ್ದೇವೆ. ಉಳಿದವರು ಇಲ್ಲ ಎಂದು ಹೇಳಿ ಮನವಿಯನ್ನು ಎಲ್ಲರಿಗೂ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಇದನ್ನು ತಂದು ಸರ್ಕಾರ ಖಂಡಿತವಾಗಿಯೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತದೆ.

ಹೊಸ ಪಡಿತರ ಚೀಟಿಗಳ ವಿತರಣೆ

ಶ್ರೀ ಕುಂಬೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೊಸ ಪಡಿತರ ಚೀಟಿಯ ಅಧ್ಯಯನ ನಡೆಯುತ್ತಿದೆ, ಸಂತೋಷ. ಆದರೆ ಅದರಿಂದ ಜನರಿಗೆ ಆಗುತ್ತಿರುವಂಥ ತೊಂದರೆಯನ್ನು ಸರ್ಕಾರ ಗಮನಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ಏನಾಗಿದೆಯೆಂದರೆ 4ನೇ ತಾರೀಖಿನೊಳಗೆ ಹೊಸ ಪಡಿತರ ಚೀಟಿಯನ್ನು ತೆಗೆದುಕೊಳ್ಳಬೇಕು. ಒಂದುವೇಳೆ ತೆಗೆದುಕೊಳ್ಳದೆ ಇದ್ದಂತಹವರಿಗೆ ಪಡಿತರವನ್ನು ಕೊಡುವಂಥ ವ್ಯವಸ್ಥೆ ಇಲ್ಲ ಎಂಬ ಮಾತು ಬಂದಿದೆ. ಈ ಆದೇಶದಿಂದ ರಜೆಯಲ್ಲಿ ಮತ್ತು ಊರಿಗೆ ಹೋದವರು. ಕೂಲಿ ಕಾರ್ಮಿಕರು ಕಾರ್ಡು ಮಾಡಿಸುವುದಕ್ಕೆ ಅವಕಾಶ ಸಿಗದೆ ಬಹಳ ತೊಂದರೆಗೆ ಒಳಗಾಗುತ್ತಿದ್ದಾರೆ. ಆದುದರಿಂದ ಸರ್ಕಾರದಲ್ಲಿ ನನ್ನ ವಿನಂತಿ ಏನೆಂದರೆ ಕಡಿಮೆ ಪಕ್ಷ ನೀವೇನು ಗುರುತಿನ ಚೀಟಿಯನ್ನು ಕೊಡುತ್ತೀರಿ, ಅದೇ ಚೀಟಿಯಲ್ಲಿ ಎರಡು ತಿಂಗಳವರೆಗೆ ಅವರಿಗೆ